ರಿಂದ ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ರೈತ ಸಂಘದವರು ಪ್ಯಾರಲಲ್ ಸರ್ಕಾರ ನಡೆಸುತ್ತೇವೆಂದು ಹೇಳಿ ಮುಖ್ಯಮಂತ್ರಿಗಳವರ ಮನವಿಯನ್ನು ಸಹ ಧಿಕ್ಕರಿಸಿ ರೈಲು ನಿಲ್ಲಿಸುತ್ತೇವೆ, ಮತ್ತು ಬಸ್ಸುಗಳನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ. ಇವನ್ನು ಯಾವ ಸರ್ಕಾರವು ತಡೆಯುವುದಕ್ಕೆ ಸಾಧ್ಯವಿಲ್ಲ ಎಂದು ಹಸೀಳಿದ್ದಾರೆ. ಆದುದರಿಂದ ತಾವು ಇದರ ಬಗ್ಗೆ ಯಾವ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಈ ಸದನಕ್ಕೆ ಮುಖ್ಯಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಹದೇವ್‌ರವರು ಬಹಳ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಲಿಲ್ಲ. ಈಗ ಅವರಿಗೆ ತಾವು ಅವಕಾಶ ಕೊಡುತ್ತಿದ್ದೀರಿ...

ಅಧ್ಯಕ್ಷರು.—ಇದರಲ್ಲಿ ೨ ಭಾಗ ಮಾಡಿದ್ದೇವೆ, ವಿಷಯದ ಗಂಭೀರತೆಯನ್ನು ನೋಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನೇ ಯಾವಾಗಲೂ ಅನ್ವಯಿಸುವುದಾದರೆ ಅದೇರೀತಿಯಾಗಿ ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು.—ನಿಮಗೆ ಏನು ಅನುಮಾನ ಇದೆ ಎಂಬುದನ್ನು ಹೇಳಿಬಿಡಿ, ನಾನು ಕರೆದಾಗ, ಮಹದೇವ್ ಅವರು ಇರಲಿಲ್ಲ. ಸದಸ್ಯರಿಗೋಸ್ಕರ ಸಭೆ ಕಾಯುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬಂದಮೇಲೆ ಪ್ರಸ್ತಾಪ ಮಾಡಿದ್ದಾರೆ ತಾವು ಅವರಿಗೆ ಅವಕಾಶ ಕೊಡದೆ ಗಮನ ಸೆಳೆಯುವ ಸೂಚನೆ ತೆಗೆದುಕೊಂಡಿರಿ. ಆದರೆ ಸಂಬಂಧಪಟ್ಟ ಮಂತ್ರಿಗಳವರು ಇಲ್ಲದಿದ್ದುದರಿಂದ ಅದನ್ನು ತೆಗೆದುಕೊಳ್ಳಲಿಲ್ಲ. ಈಗಲಾದರೂ ಅವರಿಗೆ ಅವಕಾಶ ಮಾಡಿಕೊಡಬಹುದಾಗಿತ್ತು.

STATEMENT BY THE CHIEF MINISTER

Bangalore Bundh Call giv n by "Raitha Chaluvali Sangha" On 26th January 1984

ಅಧ್ಯಕ್ಷರು.—ನಾಳೆ ದಿವಸವೇ ರೈತರು ಬಂದ್ ಕರೆಗೆ ಕೊಟ್ಟಿರುವುದರಿಂದ ಅದರ ಬಗ್ಗೆ ಏನು ಕ್ರಮವನ್ನು ಸರ್ಕಾರ ಕೈಗೊಂಡಿದೆ ಎನ್ನುವ ಬಗ್ಗೆ ಮುಖ್ಯಮಂತ್ರಿಗಳವರ ಗಮನವನ್ನು ಸೆಳೆದಿದ್ದಾರೆ. ಆದುದರಿಂದ ಇದು ಬಹಳ ಪ್ರಾಮುಖ್ಯವಾಗಿದೆ. ಮುಖ್ಯಮಂತ್ರಿಗಳವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಿನ್ನೆ ರಾತ್ರಿ ಕರ್ನಾಟಕ ರೈತ ಸಂಘದ ಉಪಾಧ್ಯಕ್ಷರಾದ ಡಾ|| ನಂಜುಂಡಸ್ವಾಮಿಯವರು ಮತ್ತು ಕೈಗಾರಿಕಾ ಮಂತ್ರಿಗಳಾದ ಶ್ರೀ ಎಸ್. ಆರ್. ಬೊಮ್ಮಾಯಿಯವರಿಗೂ ಮಾತುಕತೆಯಾಗಿದೆ. ಮತ್ತೆ ಅದರ ನಂತರ ರೈತ ಸಂಘದ ಅಧ್ಯಕ್ಷರಾದ ಶ್ರೀ ರುದ್ರಪ್ಪನವರ ಜೊತೆಯಲ್ಲಿ ಕೂಡ ಶ್ರೀ ಎಸ್. ಆರ್. ಬೊಮ್ಮಾಯಿಯವರು ಕೂಡ ದೂರವಾಣಿ ಮುಖಾಂತರ ಮಾತನಾಡಿದ್ದಾರೆ. ಮಾನ್ಯ ರುದ್ರಪ್ಪನವರು ಈ ರಸ್ತೆ ರೋಕೋ ಚಳುವಳಿಯಾಗಲೀ, ರೈಲು ರೋಕೋ ಚಳುವಳಿಯಾಗಲೀ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಆದರೆ ಅತ್ಯಂತ ಶಾಂತಿಯುತವಾಗಿ ತಮ್ಮ ಸಮಸ್ಯೆಗಳನ್ನು ವ್ಯಕ್ತ ಮಾಡುವುದಕ್ಕೋಸ್ಕರವಾಗಿ ಮತ್ತು ಸರ್ಕಾರದ ಮತ್ತು ಜನರ ಲಕ್ಷ್ಯವನ್ನು ಸೆಳೆಯುವುದಕ್ಕಾಗಿ ಇದನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಇದರಲ್ಲಿ ಗಲಭೆಯಾಗಲೀ, ಹಿಂಸೆಯಾಗಲೀ ಅಥವಾ ಯಾವುದೇರೀತಿಯ ಘರ್ಷಣೆಗಾಗಲೀ ಅವಕಾಶ ಕೊಡುವುದಿಲ್ಲ ಎಂದು ಹೇಳತಕ್ಕಂಥ ಮಾತಿನ ಆಶ್ವಾಸನೆಯನ್ನು ಅವರು ನಿನ್ನೆ ಕೊಟ್ಟಿದ್ದಾರೆ. ಮಾನ್ಯ ಬೊಮ್ಮಾಯಿಯವರು ಸಾಂಕೇತಿಕವಾಗಿ ನೀವು ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಅದನ್ನು ೨–೩ ಗಂಟೆ ಅಷ್ಟಕ್ಕೆ ಮಾತ್ರ ನಿಲ್ಲಿಸಿ ಎಂದು ಹೇಳಿದರು. ಅದಕ್ಕೆ ಉತ್ತರವಾಗಿ ಏನು ಹೇಳಿದರು ಎಂದರೆ ಈಗ ನಾವು ಕೇಂದ್ರ ಸರ್ಕಾರದ ವಿರುದ್ಧವೂ ಕೂಡ ಕೆಲವು ಆಪಾದನೆಗಳು ಮಾಡುತ್ತಿದ್ದೇವೆ ಮತ್ತು ಕೆಲವು ದೂರುಗಳಿವೆ, ನಮ್ಮ ಅನೇಕ ಸಮಸ್ಯೆಗಳು ಕೇಂದ್ರ ಸರ್ಕಾರದ ನೀತಿಯಿಂದ

ಹುಟ್ಟಿಕೊಂಡಿವೆ. ಅದಕ್ಕಾಗಿ ಅವರ ವಿರುದ್ಧ ಕೂಡ ಪ್ರತಿಭಟನೆ ಮಾಡುತ್ತಿದ್ದೇವೆ. ಅದಕ್ಕಾಗಿಯೇ ನಾವು ರೈಲು ರೋಕೋ ಕೂಡ ಮಾಡುತ್ತೇವೆ ಎಂದು ಹೇಳಿದರು. ಸಾಂಕೇತಿಕವಾಗಿ ೨–೩ ಗಂಟೆಗಳ ಕಾಲ ಮಾಡಿ ಎಂದು ಹೇಳಿದ ಮನವಿಗೆ ಅವರಿಂದ ಅಷ್ಟೊಂದು ತೃಪ್ತಿಕರವಾದಂಥ ಪ್ರತಿಕ್ರಿಯೆ ಬರಲಿಲ್ಲ. ಮಾನ್ಯ ಅಧ್ಯಕ್ಷರೇ ನಾಳೆ ಈ ಕ್ರಮವನ್ನು ಹಾಕಿಕೊಂಡಿದ್ದಕ್ಕಾಗಿ ನಾವು ಸೂಕ್ತ ವ್ಯವಸ್ಥೆ ಮಾಡಬೇಕಾಗುತ್ತದೆ. ನಾನು ಮಾನ್ಯ ರುದ್ರಪ್ಪನವರಲ್ಲಿ ವಿಶ್ವಾಸವನ್ನು ಇಡುತ್ತೇನೆ. ಈ ಕ್ರಮದಿಂದ ಸಾಮಾನ್ಯ ಜನತೆಗೂ ಅನಾನುಕೂಲ ಉಂಟಾಗುತ್ತದೆ. ಕೋರ್ಟಿ ಕೆಲಸಗಳಿಗೆ ಬರುವವರು ಇರಬಹುದು, ಆಸ್ಪತ್ರೆಯಲ್ಲಿ ಅವರ ಸಂಬಂಧಿಕರು ಯಾರಾದರೂ ಕಳವಳಿಕಾರಿಯಾದ ಸ್ಥಿತಿಯಲ್ಲಿ ಇದ್ದು ಅವರನ್ನು ನೋಡಲು ಬರಬಹುದು, ಅಥವಾ ಬೇರೆ ಯಾವುದೇ ಒಂದು ಜರೂರಾದ ಕೆಲಸಗಳಿಗೆ ಬೆಂಗಳೂರಿಗೆ ಬರುವವರು ಇರಬಹುದು ಅಥವಾ ಬೆಂಗಳೂರಿನಿಂದ ಹೊರಗಡೆ ಹೋಗುವವರು ಇರಬಹುದು. ಇಂಥಾ ಲಕ್ಷಾಂತರ ನಮ್ಮ ಕರ್ನಾಟಕ ಜನರಿಗೆ ತೊಂದರೆಯಾಗುತ್ತದೆ ಮತ್ತು ಅನಾನುಕೂಲವಾಗುತ್ತದೆ. ನಾನು ಆಸೆ ಮಾಡಿಕೊಂಡಿದ್ದು ಏನೆಂದರೆ ಸಾಮಾನ್ಯವಾಗಿ ನಾನು ಮಾಡಿದಂಥ ಮನವಿಗೆ ಅವರು ಮಾರ್ಧನಿ ಕೊಡುತ್ತಾರೆ ಮತ್ತು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡುತ್ತಾರೆಂದು ಹೇಳಿ ನಾನು ಆಶೆ ಮಾಡಿಕೊಂಡಿದೆ. ಆ ಆಶೆ ಫಲಿಸಲಿಲ್ಲ. ಮಾನ್ಯ ಅಧ್ಯಕ್ಷರೆ, ರೈತರು ಸ್ವಭಾವತಃ ಹಿಂಸಾಚಾರಿಗಳಲ್ಲ, ಅವರು ತಾವಾಗಿಯೇ ಯಾರ ಮೇಲೂ ಕೈಯೆತ್ತುವವರಲ್ಲ. ಮತ್ತು ನಾಳೆ ಆಗ ತಕ್ಕಂತಹ ಕಾರ್ಯಕ್ರಮದಲ್ಲೂ ಕೂಡ ನೂರಕ್ಕೆ ನೂರು ರೈತರೇ ಆಗಿದ್ದರೆ ಹಿಂಸಾಚಾರ ಆಗುವುದಿಲ್ಲ ಎನ್ನುವ ಭಯ ಇರುತ್ತಿರಲಿಲ್ಲ. ಆದರೆ ಮಾನ್ಯ ಅಧ್ಯಕ್ಷರೇ ಇಂತಹ ಪರಿಸ್ಥಿತಿಯಲ್ಲಿ ಯಾರ್ಯಾರು ಸೇರಿಕೊಳ್ಳುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ. ಬಹುಶಃ ಅದರಲ್ಲಿ ಭಾಗವಹಿಸುವವರೆಲ್ಲರೂ ಗುರುತಿನ ಚೀಟಿಯನ್ನು ಇಟ್ಟುಕೊಂಡು ಭಾಗವಹಿಸುವುದಿಲ್ಲ, ಮತ್ತು ಗುರುತು ಹಿಡಿಯತಕ್ಕವರು ಯಾರು ಇರುವುದಿಲ್ಲ. ಈ ಒಂದು ಕಾರಣದಿಂದ ನನ್ನ ಮನಸ್ಸಿನಲ್ಲಿ ಸ್ವಲ್ಪಮಟ್ಟಿಗೆ ಭಯವಿದೆ. ಪರಿಸ್ಥಿತಿ ಏನಾದರೂ ವಿಕೋಪಕ್ಕೆ ಹೋಗಬಹುದು. ಆದರೆ ಪೋಲೀಸ್ ಸಿಬ್ಬಂದಿ ವರ್ಗಕ್ಕೆ ಅಥವಾ ಸರ್ಕಾರದ ಯಾವುದೇ ಬೇರೆ ಖಾತೆಯ ಸಿಬ್ಬಂದಿಯವರಿಂದ ಚಳುವಳಿ ಮಾಡತಕ್ಕವರಿಗೆ ಪ್ರಚೋದನೆಗೊಳಿಸತಕ್ಕ ರೀತಿಯಲ್ಲಿ ಯಾವ ಕೆಲಸವೂ ಆಗುವುದಿಲ್ಲ ಎಂದು ಹೇಳತಕ್ಕ ಆಶ್ವಾಸನೆಯನ್ನು ಈ ಸದನಕ್ಕೆ ನಾನು ಕೊಡಲಿಕ್ಕೆ ಬಯಸುತ್ತೇನೆ. ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಅವರ ಮನವೊಲಿಸುವುದು ಅವರಿಗೆ ತಿಳಿಸುವುದು ಮತ್ತೆ ಯಾವುದೇ ರೀತಿಯಲ್ಲಿ ಶಕ್ತಿಯನ್ನು ಅಂದರೆ ದಂಡ ಶಕ್ತಿಯನ್ನು ಉಪಯೋಗಿಸದೇ ನಾಳೆಯ ದಿವಸ ಪೋಲೀಸಿನವರು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದು ಹೇಳಿದ್ದೇನೆ, ಮತ್ತು ಅದೇ ರೀತಿ ಅವರು ಮಾಡುತ್ತಾರೆ. ಆದರೂ ಕೆಲವು ತಿಂಗಳುಗಳಿಂದ ಆದಂಥ ಘಟನೆಗಳು ಏನಿದೆ ಆ ಹಿನ್ನೆಲೆಯಲ್ಲಿ ಇದನ್ನು ನೋಡಿದರೆ ಎಲ್ಲಿಯಾದರೂ ವಿಕೋಪ ಪರಿಸ್ಥಿತಿ ಉಂಟಾದರೆ ಆಶ್ಚರ್ಯಕರವಲ್ಲವೆಂದು ಹೇಳುವುದಿಲ್ಲ. ಕಳೆದ ಎಂಟು-ಹತ್ತು ತಿಂಗಳ ಅವಧಿಯಲ್ಲಿ ಒಟ್ಟು ಇಂತಹ ನೂರಾರು ಘಟನೆಗಳು ನಡೆದಿವೆ ಎಂದರೆ ಇಲ್ಲಿ ಅಧಿಕಾರಿಗಳ ಮೇಲೆ ಕೈಮಾಡುವುದು, ಅವರ ಕುತ್ತಿಗೆ ಪಟ್ಟಿ ಹಿಡಿಯುವುದು ಮತ್ತು ಅಧಿಕಾರಿಗಳ ತಂದೆ, ತಾಯಿ, ಅಜ್ಜ ಮುತ್ತಜ್ಜರಿಂದ ಹಿಡಿದು ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಬೈಯ್ಯುವುದು ಮತ್ತು ಅತ್ಯಂತ ತುಚ್ಛವಾದ ರೀತಿಯಲ್ಲಿ ಅವರನ್ನು ನೋಡತಕ್ಕದ್ದು ನಡೆದಿದೆ. ನಾನು ಮೊದಲೇ ಹೇಳಿದ ಹಾಗೆ ನಿಜವಾದ ರೈತನಾದವನು ಇಂತಹ ಅನುಸಂಸ್ಕೃತಿಕ ಕೆಲಸ ಮಾಡುವುದಿಲ್ಲ. ನಾನು ಸ್ವತಃ ಒಬ್ಬ ರೈತನ ಮಗ. ನಾನು ಪೂಜಾರಿಯೆಂದು ರೈತ ಸಂಘದ ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಂತ ಯಾರು ಹೇಳಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಹೇಳಿದ್ದಾರೆ. ಅದಕ್ಕೆಂದೇ ನಾನು ಹೇಳುತ್ತಿರುವುದು. ನಾನು ಸ್ವತಃ ಅಡಿಕೆ ಮರವನ್ನು ಹತ್ತಿ ಅಡಿಕೆಗೆ ಕೊಟ್ಟೆಯನ್ನು ಕಟ್ಟಿದ್ದೇನೆ. ನಾನು ಸ್ವತಃ ರೈತನಾಗಿ ಕೆಲಸ ಮಾಡತಕ್ಕಂಥವನು. ಆದ್ದರಿಂದ ರೈತರ ಸಮಸ್ಯೆಗಳು ನನಗೆ ಗೊತ್ತಿಲ್ಲವೆಂದು ಯಾರಾದರೂ ತಿಳಿದುಕೊಂಡರೆ ಮತ್ತು ರೈತರ ಸಮಸ್ಯೆಗಳ ಬಗ್ಗೆ ನನಗೆ ಸಹಾನುಭೂತಿ ಇಲ್ಲವೆಂದು ಹೇಳಿದರೆ ಅದು ತಪ್ಪು.

ಶ್ರೀ ಎಸ್. ಬಂಗಾರಪ್ಪ.—ಅಡಿಕೆಗೆ ಏನು ಕೊಟ್ಟೆ ಕಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಹೊಸದಾಗಿ ತೋಟ ಮಾಡುತ್ತಿದ್ದಾರೆ. ನಿಮಗೆ ಹೇಗೆ ಗೊತ್ತಾಗಬೇಕು ?

ಅಧ್ಯಕ್ಷರು.—ಅವರು ತೋಟವನ್ನು ಮಾಡಿಸುತ್ತಿದ್ದಾರೋ......

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಹೆಗಡೆಯವರ ಅಪೂರ್ಣ ಜ್ಞಾನಕ್ಕೆ ನನಗೆ ಖೇದವಾಗುತ್ತದೆ. ಏಕೆಂದರೆ ನಾನು ಅಡಿಕೆ ತೋಟ ಮಾಡಿಲ್ಲವೆಂದು ಹೇಳುತ್ತಿದ್ದೀರಿ. ನೀವು ಅಡಿಕೆಗೆ ಕೊಟ್ಟೆ ಕಟ್ಟಿಸಿರುವುದೇ ನನ್ನಂಥವರಿಂದ. ಕೊಟ್ಟೆಯನ್ನು ಕಟ್ಟಿಸಿದವರು ನೀವು ಅಡಿಕೆ ಬೆಳೆಯುವುದಲ್ಲ ಪ್ರಶ್ನೆ. ಮರ ಹತ್ತುವುದಕ್ಕೆ ತಯಾರಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ಸ್ಪರ್ಧೆಯನ್ನು ಇಡಿ. ಯಾರು ಜಯಗಳಿಸುತ್ತಾರೋ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳು ಮರ ಹತ್ತುವ ವಿಚಾರ ಹೇಳಿದರು. ನಾನು ಕೂಡ ಮರ ಹತ್ತಿದವನು. ಆದರೆ ನಮ್ಮದು ಮರ ಹತ್ತುವ ಟ್ರೈಪು ಮೋಸ ಮಾಡಿ ಮರ ಹತ್ತುವುದಲ್ಲ. ನಮಗೆ ನೇರವಾಗಿ ಮರ ಹತ್ತುವ ಶಕ್ತಿ ಇದೆ. ನಿಮ್ಮ ಟ್ರೈಪು ಮೋಸದಿಂದ ಮರ ಹತ್ತುವುದು.

ಒಬ್ಬರು ಮಾನ್ಯ ಸದಸ್ಯರು.—ಬಂಗಾರಪ್ಪನವರು ಮರ ಇಳಿಯಲಿಕ್ಕೆ ಹತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಬಂಗಾರಪ್ಪನವರಿಗೆ ಮರ ಹತ್ತುವುದಕ್ಕೆ ಗೊತ್ತಿದ್ದರೆ ಸಂತೋಷ. ಅಷ್ಟೇ ಅಲ್ಲ, ಒಂದು ಮರದಿಂದ ಇನ್ನೊಂದು ಮರಕ್ಕೆ ಜಿಗಿಯುವುದು ಕೂಡ ಅವರಿಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಅವರೂ ಕೂಡ ಕಾಂಗ್ರೆಸ್ ಮರದವರೇ. ಈಗ ಜಿಗಿದ ಬಿಟ್ಟಿದ್ದಾರೆ. ಅವರ ಮರದ ಮೂಲ ಬೇರು ನಮಗೆ ಗೊತ್ತಿದೆ. ನಿಮ್ಮ ಮರದ ಆಳ, ಎತ್ತರ ಮತ್ತು ಅದರ ತಾಯಿ ಬೇರು ನಮಗೆ ಗೊತ್ತಿದೆ. ನಿಮ್ಮ ತಾಯಿ ಬೇರಿನ ಪೂರ್ತಿ ಮಾಹಿತಿ ನಮ್ಮ ಹತ್ತಿರ ಇದೆ.

ಅಧ್ಯಕ್ಷರು.—ನಾಳೆ ನಡೆಯಲಿರುವ ರೈತರ ಚಳುವಳಿಗೆ ಸಂಬಂಧಪಟ್ಟ ಹಾಗೆ ಗಂಭೀರವಾದ ವಿಷಯದ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ ಇಲ್ಲಿ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ರೈತರ ಚಳುವಳಿ ಬಗ್ಗೆ ಮಾತನಾಡುತ್ತಿರುವುದಾದರೆ, ಇವರು ಮರ ಹತ್ತಿ ಕೊಟ್ಟೆ ಕಟ್ಟಿದ್ದಾರಂತೆ.

ಅಧ್ಯಕ್ಷರು.—ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಂಡು ನಾವು ಇಲ್ಲಿ ಚರ್ಚೆ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ಸಾಂಧರ್ಭಿಕವಾಗಿ ಈ ಕಾರಣವನ್ನು ನಾನು ಹೇಳಿದೆ. ರೈತರ ಸಮಸ್ಯೆಗಳು ನನಗೆ ಚೆನ್ನಾಗಿ ಗೊತ್ತುಂಟು. ನಾವು ರೈತಾಪಿ ವರ್ಗಕ್ಕೆ ಏನು ಮಾಡಿದ್ದೇವೆ ಎಂದು ಇಲ್ಲಿ ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ಒಂದೇ ಮಾತಿನಲ್ಲಿ ಮೊನ್ನೆ ದಿವಸ ಹೇಳಿದೆ. ಈ ಒಂದು ವರ್ಷದಲ್ಲಿ ನಮ್ಮ ಆರ್ಥಿಕ ಇತಿಮಿತಿಗಳೊಳಗೆ ಎಷ್ಟರಮಟ್ಟಿಗೆ ರೈತರಿಗೆ ಸಹಾಯ ಮಾಡ ತಕ್ಕಂಥಾದ್ದು, ಪರಿಹಾರ ಕೊಡಬಹುದೋ ಅಷ್ಟರಮಟ್ಟಿಗೂ ಕೊಟ್ಟಿದ್ದೇವೆ. ಹಿಂದೆಂದೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ಸರ್ಕಾರವೂ ಅಷ್ಟು ಮಾಡಿರಲಿಲ್ಲ. ಆದರೂ ಅವರಿಗೆ ಸಮಾಧಾನ ಇಲ್ಲ. ಈಗ ಕೆಲವು ಸಮಸ್ಯೆಗಳು ಇವತ್ತು ನಮ್ಮ ಕೈಯಲ್ಲಿಲ್ಲ. ಉದಾಹರಣೆಗೆ ಅವರು ಹೇಳುತ್ತಾರೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ನಡೆಸತಕ್ಕಂಥವರಿಗೆ ಸರ್ಕಾರ ಬೇಕಾದಷ್ಟು ಸವಲತ್ತನ್ನು ಕೊಟ್ಟಿದೆ. ಕಡಿಮೆ ಬಡ್ಡಿಯಿಂದ ಅವರಿಗೆ ಸಾಲಗಳನ್ನು ಕೊಡುತ್ತದೆ. ಕೈಗಾರಿಕೆಗಳು ನಷ್ಟದಲ್ಲಿ ನಡೆಯುತ್ತಿದ್ದರೆ ಸರ್ಕಾರವೇ ಅವುಗಳನ್ನು ತನ್ನ ಕೈಗೆ ತೆಗೆದುಕೊಳ್ಳುತ್ತದೆ. ಅಥವಾ ಅಂತಹ ಕೈಗಾರಿಕೆಗಳನ್ನು ನಡೆಸಲಿಕ್ಕೆ ಮತ್ತಷ್ಟು ಸಹಾಯವನ್ನು ಕೊಡುತ್ತದೆ. ನಿಜ, ನನಗೆ ಸಂಪೂರ್ಣವಾದಂತಹ ಸಹಾನುಭೂತಿ ಈ ವಿಚಾರದಲ್ಲಿ ರೈತರ ಬಗ್ಗೆ ಇದೆ. ಈ ವಿಚಾರವನ್ನು ನಾನು ಕೂಡ ವಿರೋಧ ಮಾಡಿದ್ದೇನೆ ಎಲ್ಲೆಲ್ಲಿ ಸಂದರ್ಭ ಸಿಕ್ಕಿದೆಯೋ ಅಂತಹ ಸಂದರ್ಭದಲ್ಲಿ ನಾನು ವಿರೋಧ ಮಾಡಿದ್ದೇನೆ. ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನಲ್ಲಿ ಪ್ರತಿವರ್ಷವೂ ಕೋಟ್ಯಾಂತರ ರೂಪಾಯಿಗಳ ನಷ್ಟ ಇವತ್ತೂ ಆಗುತ್ತದೆ. ಇದೇ ರೀತಿ ಇನ್ನಿತರ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲೂ ಕೂಡ ನಷ್ಟ ಆಗುತ್ತಿದೆ. ಬೊಂಬಾಯಿ ಶಹರದಲ್ಲೇ ಸುಮಾರು ಅರವತ್ತು ಗಿರಣಿಗಳು ಬಂದ್ ಆದವು. ಆ ಸಂದರ್ಭದಲ್ಲಿ ಹತ್ತು ಗಿರಣಿಗಳನ್ನು ಕೇಂದ್ರ ಸರ್ಕಾರದವರು ತಮ್ಮ ಕೈಗೆ ತೆಗೆದುಕೊಂಡರು ಅದೇ ರೀತಿ ರೈತರಿಗೆ ಕಷ್ಟ ಬಂದಾಗ ಕೇಂದ್ರ ಸರ್ಕಾರದವರಾಗಲೀ, ರಾಜ್ಯ ಸರ್ಕಾರದವರಾಗಲೀ ರೈತರಿಗೆ ಸಹಾಯ ಮಾಡುವ

ದಿಲ್ಲ, ಅವರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಗಮನ ಕೊಡುವುದಿಲ್ಲ ಎನ್ನುವ ಏನು ಸಮಸ್ಯೆ ಇದೆ, ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಾವು ಎಷ್ಟರಮಟ್ಟಿಗೆ ಕೈಗಾರಿಕೆಗಳಿಗೆ ಮಹತ್ವ ಕೊಡುತ್ತೇವೆ ಅದೇ ರೀತಿಯಲ್ಲಿ ವ್ಯವಸಾಯಗಾರರಿಗೂ ಮಹತ್ವ ಕೊಡಬೇಕು ಎನ್ನುವ ಅಭಿಪ್ರಾಯ ನನ್ನದು ರೈತರು ಕೊಡತಕ್ಕಂಥ ವಸ್ತುಗಳ ಬೆಲೆ ಮತ್ತು ಮಾರಾಟ ಮಾಡತಕ್ಕಂಥ ವಸ್ತುಗಳ ಬೆಲೆಯಲ್ಲಿ ಹೆಚ್ಚುಪರಿ ಕಮ್ಮಿಪರಿ ಆದಾಗ ಇದನ್ನು ಒಂದೇ ರೀತಿಯಲ್ಲಿ ಹತೋಟಿಯಲ್ಲಿಡಬೇಕು ಎನ್ನುವುದು ಇವತ್ತು ನಾವೆಲ್ಲರೂ ಒಪ್ಪತಕ್ಕಂಥ ಮಾತು. ಈಗ ರೈತ ಸಂಘದವರು ಮೊನ್ನೆ ಕೊಟ್ಟಂತಹ ಬೇಡಿಕೆಗಳನ್ನು, ಅವರ ಮೂರು-ನಾಲ್ಕು ಸಮಸ್ಯೆಗಳನ್ನು ಈ ಮಾನ್ಯ ಸಭೆಯ ಅವಗಾಹನೆಗೆ ತರಬಯಸುತ್ತೇನೆ. ಅದರಲ್ಲಿ 'ಪ್ರಜಾಪ್ರಭುತ್ವವನ್ನು ಉತ್ತಮ ಪಡಿಸಲು ಸತ್ಯಾಗ್ರಹಿಗಳ ಮೇಲೆ ಗೋಲಿಬಾರು ರದ್ದು'' ಎಂದಿದೆ. ನಾನು ಇವತ್ತು ಆಶ್ವಾಸನೆ ಕೊಡತ್ತೇನೆ ಏನೆಂದರೆ ಶಾಂತಿಯುತವಾಗಿ ಯಾವುದೇ ಚಳುವಳಿ ನಡೆಯಲ್ಲಿ ರೈತರ ಮೇಲೆ ಈ ಸರ್ಕಾರ ಗೋಲಿ ಬಾರು ಮಾಡುವುದಿಲ್ಲ. ರೈತರ ಮೇಲೆ ಜಪ್ತಿ ರದ್ದು. ವಾರೆಂಟ್ ಇಲ್ಲದೆ ದಸ್ತಗಿರಿ ರದ್ದು ಮಾಡಬೇಕೆಂದು ಹೇಳಿದ್ದಾರೆ. ಯಾರಾದರೂ ಒಬ್ಬ ರೈತನಿಂದ ಕ್ರಿಮಿನಲ್ ಅಫೆನ್ಸ್ ಆಯಿತು ಎಂದಾಗ ಆತನನ್ನು ವಾರೆಂಟ್ ಇಲ್ಲದೆ ದಸ್ತಗಿರಿ ಮಾಡಕೂಡದು ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ರಾಜಕೀಯ ಕಾರಣಕ್ಕಾಗಿ ಯಾವ ರೈತನನ್ನೂ ವಾರೆಂಟ್ ಇಲ್ಲದೇ ಬಂದಿಸತಕ್ಕ ಅಪರಾದವನ್ನು ನಾವು ಮಾಡುವುದಿಲ್ಲ. ಅಂತಹ ಸರ್ಕಾರ ಇದಲ್ಲ. ಮತ್ತು ಜಪ್ತಿ ವಿಚಾರ. ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ಇಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈಗ ರೈತರಲ್ಲೂ ಕೂಡ ನೀರಾವರಿ ಲಾಭ ಪಡೆಯತಕ್ಕಂಥ ರೈತರು ಇದ್ದಾರೆ. ಇಂತಹವರ ಸಂಖ್ಯೆ ಬಹಳ ಕಡಿಮೆ. ಕೇವಲ ಮಳೆ ನೀರಿನ ಆಧಾರದ ಮೇಲೆ ವ್ಯವಸಾಯವನ್ನು ಮಾಡತಕ್ಕಂಥ ರೈತರು ಇದ್ದಾರೆ. ಅಂಥವರ ಸಂಖ್ಯೆ ಬಹಳ ದೊಡ್ಡದು. ನಮ್ಮ ರಾಜ್ಯದಲ್ಲಿ ಮೂರರಲ್ಲಿ ಒಂದು ಭಾಗದಷ್ಟು ಮಾತ್ರ ಮಳೆಯಿಂದಾಗಲೀ ಅಥವಾ ಹೊಳೆಯಿಂದಾಗಲೀ ನೀರಾವರಿ ಮಾಡತಕ್ಕಂಥ ಸೌಲಭ್ಯ ಇದೆ. ಯಾವ ಭಾಗದಲ್ಲಿ ನೀರಾವರಿಯನ್ನು ಮಾಡಿದ್ದೇವೆಯೋ ಆ ಭಾಗದ ರೈತರು ತಮ್ಮ

೧೧.೦೦ ಎ. ಎಂ.

ಕೆಲಸ ಮುಗಿಯಿತು ಇನ್ನು ಏನೂ ಕೊಡಬೇಕಾದುದು ಇಲ್ಲಿ, ನೀರಿನ ಕಂದಾಯ ಕೊಡಕೂಡದು ಜಮೀನಿನ ಮೇಲಿನ ಕಂದಾಯವನ್ನು ಕೊಡಕೂಡದು, ಅಥವಾ ಅವರ ಮೇಲೆ ಇರತಕ್ಕ ಎಷ್ಟೇ ಬಡಿ ಸಾಲಇರಲಿ, ಅದನ್ನು ಯಾವುದನ್ನೂ ಸಹ ಸರ್ಕಾರಕ್ಕೆ ಕೊಡಕೂಡದೆಂದು ಹೇಳುವಂತಹ ಒಂದು ಧೋರಣೆಯನ್ನು ತಳೆದಿದ್ದಾರೆ. ಅದೇ ರೈತ ಭಾಂದವರಿಗೆ ನಾನು ಕೇಳುತ್ತೇನೆ. ಹಾಗಿದ್ದರೆ ನಿಮ್ಮ ಪಕ್ಕದಲ್ಲಿರತಕ್ಕ ಅಣ್ಣತಮ್ಮಂದಿರ ಗತಿ ಏನು ಆಗಬೇಕು ? ತುಂಗಭದ್ರಾ ನದಿಯ ಮೇಲೆ ಭದ್ರಾ ನದಿಯ ಮೇಲೆ ಕಬಿನಿ ನದಿಯ ಮೇಲೆ, ಕಾವೇರಿ ನದಿಯಮೇಲೆ, ನಂತರ ಸುವರ್ಣಾವತಿ ನದಿಯ ಮೇಲೆ ಅಡ್ಡಗಟ್ಟೆಯನ್ನು ಕಟ್ಟಿ ನೀರಾವರಿ ಯೋಜನೆಗಳನ್ನು ನಾವು ಮಾಡಿದ್ದೇವೆ. ಈ ಯೋಜನೆಗೆ ಹಾಕಿರತಕ್ಕ ದುಡ್ಡು ಯಾರದು ? ಇದು ಇಡೀ ಕರ್ನಾಟಕ ಜನತೆಯಿಂದ ಬಂದಿದ್ದರಿಂದಲೇ ನಾವು ಅದನ್ನು ಮಾಡಿರ ತಕ್ಕದ್ದು. ಈ ಅಧಿಕಾರಿಗಳೆನಿದ್ದಾರೆ ಅವರ ಶರಟು ಯಾರದ್ದು ? ಈ ಶರಟನ್ನು ನಾವು ಕೊಟ್ಟದ್ದು ಎಂದು ಈ ರೀತಿಯ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅಂತಹ ಪ್ರಶ್ನೆಗಳನ್ನು ಅಧಿಕಾರಿಗಳಿಗೆ ಕೇಳುತ್ತಿದ್ದಾರೆ. ಅಂತಹವರಿಗೆ ನಾನು ಅದೇ ಪ್ರಶ್ನೆಯನ್ನು ಕೇಳುತ್ತೇನೆ. ನೀವು ಹಾಕಿಕೊಂಡಿರತಕ್ಕಂತಹ ಶರಟು ಯಾರದ್ದು ? ಕೆಲವರು ಇಂತಹ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಅಂತಹ ಜಾಗದಿಂದ ಈ ಒಂದು ಪ್ರತಿಭಟನೆ ಬರುತ್ತದೆ. ಎಲ್ಲಿ ರೈತರು ಮಳೆ ಬಂದರ ನಾಲ್ಕು ಪಟ್ಟು ಹೆಚ್ಚು ಬೆಳೆಯನ್ನು ತೆಗೆದುಕೊಳ್ಳುತ್ತಾರೋ ಅಂತಹವರಲ್ಲಿ ಈ ಪ್ರವೃತ್ತಿ ಇಲ್ಲ. ಈಗ ಅದಕ್ಕಾಗಿ ನಾನು ಹೇಳುವುದೇನೆಂದರೆ, ಯಾರು ಉದ್ದೇಶಪೂರ್ವಕವಾಗಿ ತಮ್ಮಲ್ಲಿ ಶಕ್ತಿ ಇದ್ದರೂ ಕೂಡ ಸಾಲವನ್ನೂ ತೀರಿಸವುದಿಲ್ಲವೋ ? ಅಂತಹವರಿಂದಲೂ ಕೂಡ ಸಾಲವನ್ನು ವಸೂಲು ಮಾಡುವಂತಹ ಯಾವ ಕ್ರಮವನ್ನೂ ತೆಗೆದುಕೊಳ್ಳಕೂಡದು ಅಂತ ಹೇಳಿದರೆ ಅದನ್ನು ನಾನು ಒಪ್ಪುವುದಕಾಗುವುದಿಲ್ಲ ಮೊನ್ನೆಯೇ ನಾನಾ ಹೇಳಿದ್ದೇನೆ. ೧೧೦ ಕೋಟಿ ರೂಪಾಯಿಗಳು ಕಡ್ಡಾಯ ಬಾಕಿ ಸಾಲ ವಸೂಲಾಗಿದೆ. ಇನ್ನೂ ೬೦-೭೦ ಕೋಟಿ ರೂಪಾಯಿಗಳ ಬಾಕಿ ಇದೆ. ಇಷ್ಟರಲ್ಲೇ ನಬಾರ್ಡಿನ ಛೇರ್ಮನ್‌ರವರನ್ನು ನಾನು ಕರೆದಿದ್ದೇನೆ. ಅವರು ೩೧ನೇ ತಾರೀಖು ಬರುತ್ತಿದ್ದಾರೆ. ಅವರ ಹತ್ತಿರ ಮಾತನಾಡುತ್ತೇನೆ. ಅವರನ್ನು ಯಾವುದಾದರೂ ರೂಪದಲ್ಲಿ ಮನ ಒಲಿಸಬಹುದು ಅಂತ ಹೇಳತಕ್ಕಂತಹ ವಿಶ್ವಾಸ ನನ್ನಲ್ಲಿದೆ. ಏಕೆಂದರೆ ಬಡ್ಡಿ ರಿಯಾಯಿತಿಯನ್ನು ಎಷ್ಟೇ ಕೊಟ್ಟರೂ ಕೂಡ ದುಡ್ಡು ಹೋಗತಕ್ಕಂತಹದ್ದು ನಮ್ಮದು. ಅವರದಲ್ಲ ಆದರೆ ಇದಕ್ಕೆ ಈಗ ತಾಂತ್ರಿಕವಾಗಿ ಅಬ್ಜಕ್ಷನ್ ಹಾಕಿದ್ದಾರೆ. ಅವರ ಮನವೊಲಿಸಿ ಇನ್ನೊಂದು ಸಲ ನಮಗೆ ಈ ಒಂದು ಅವಕಾಶವನ್ನು

ಕೊಡಿ ಅಂತ ಅವರಲ್ಲಿ ಕೇಳುತ್ತೇನೆ. ಬಹುಶಃ ಅದಕ್ಕವರು ಒಪ್ಪಬಹುದೆಂದು ಕಾಣುತ್ತದೆ. ಆದರೆ ಮತ್ತೊಂದು ವಿಚಾರ ಇಲ್ಲಿ ಬರುತ್ತದೆ. ಇದರಲ್ಲಿ ರೈತ ಸಂಘದ ಅಧ್ಯಕ್ಷ ಶ್ರೀ ನಾಗರಾಜ್‌ರವರು ಒತ್ತೆ ಇಟ್ಟುಕೊಂಡಿರುವುದನ್ನು ವಾಪಸ್ಸು ಕೊಡಿ ಅಂತ ಹೇಳುತ್ತಿದ್ದಾರೆ. ಯಾವುದು ಹರಾಜು ಹಾಕಿ ಕೊಟ್ಟುಬಿಟ್ಟಿದ್ದಾರೋ ಅದನ್ನು ವಾಪಸ್ಸು ಕೊಡತಕ್ಕಂತಹದ್ದು ಇಲ್ಲಿ ಬರುವುದಿಲ್ಲ. ಅದಕ್ಕೆ ಅವಕಾಶ ಕೂಡ ಇಲ್ಲ. ಆಮೇಲೆ ಮತ್ತೊಂದು ಅವರ ಬೇಡಿಕೆ ಎಂದರೆ ನೀಲಗಿರಿ ಸಸಿಯನ್ನು ಹಂಚುತ್ತಿರುವ ಬಗ್ಗೆ. ನೀಲಗಿರಿ ಸಸಿಗಳನ್ನು ಹಂಚಲು ವಿಶ್ವ ಬ್ಯಾಂಕಿನಿಂದ ಸಾಲವನ್ನು ತಂದಿದ್ದೀರಿ ಅದನ್ನು ಬಿಟ್ಟುಬಿಡಿ ಅದರ ಬದಲು ಇತರೆ ಸಸಿಗಳನ್ನು ಹಂಚಿ ಎಂದು ಹೇಳುತ್ತಿದ್ದಾರೆ. ಇದು ಒಂದು ಅವರ ಬೇಡಿಕೆ. ಇದನ್ನು ನಾವು ಬಂದಮೇಲೆ ಮಾಡಿದ್ದಲ್ಲ. ನೀಲಗಿರಿ ಗಿಡ ಒಳ್ಳೆಯದೋ ಕೆಟ್ಟದ್ದೋ ಎಂದು ಹೇಳುವ ಬಗ್ಗೆ ನಮ್ಮ ದೇಶದಲ್ಲಿ ಬಹಳ ದೊಡ್ಡ ಚರ್ಚೆ ನಡೆದಿದೆ. ಇಲ್ಲೂ ಕೂಡ ಅದರ ಬಗ್ಗೆ ಧೀರ್ಘವಾಗಿ ಚರ್ಚೆ ಮಾಡಿದ್ದೇವೆ. ಬೇರೆ ಕಡೆ ಒಟ್ಟು ನೀಲಗಿರಿ ಮರದಲ್ಲಿ ೨ ಸಾವಿರ ಜಾತಿ ಇದ್ದಾವೆ, ನಮ್ಮ ದೆ ಶದಲ್ಲಿ ಇಲ್ಲಿ ಜಾರಿಯಲ್ಲಿರತಕ್ಕಂತಹದ್ದು ಕೇವಲ ೬–೭ ತರಹದ ನೀಲಗಿರಿ ಮರ ಮಾತ್ರ. ಆದ್ದರಿಂದ ಇದರಲ್ಲಿ ಬರತಕ್ಕ ತೊಂದರೆಯನ್ನು ನಿವಾರಿಸುವುದಕ್ಕೂ ಕೂಡ ಒಂದು ಹೊಸ ನೀತಿಯನ್ನು ಕಳೆದ ೬ ತಿಂಗಳಿನಿಂದ ಅನುಸರಿಸುತ್ತಿದ್ದೇವೆ.

ಶ್ರೀ ಎಸ್, ಸೂರ್ಯನಾರಾಯಣ ರಾವ್.—ಹೊಲಗಳಲ್ಲೆಲ್ಲಾ ಹಾಕುತ್ತಿದ್ದಾರೆ. ಅದು ಕಮರ್ಷಿಯಲ್ ಕ್ರಾಪ್ ತರಹ.

ಶ್ರೀ ರಾಮಕೃಷ್ಣ ಹೆಗಡೆ.—ವಿಸ್ತೀರ್ಣವಾಗಿ ಮರ ಬೆಳೆಯುತಕ್ಕ ಪ್ರದೇಶದಲ್ಲಿ, ಅಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಕೆಲವು ಕಡೆಗಳಲ್ಲಿ ಇದರ ವಿಸ್ತೀರ್ಣವನ್ನು ನಾವು ಕಡಿಮೆ ಮಾಡಿದ್ದೇವೆ. ಆಮೇಲೆ ಭೂಹೀನರಿಗೆ, ಭೂಹೀನ ಕಾರ್ಮಿಕರಿಗೆ, ಉತ್ಪಾದನಾ ಸಾಧನ ಹಾಗೂ ಇನ್ನಿತರೆ ಸಾಧನಗಳನ್ನು ಉಚಿತವಾಗಿ ಕೊಡುವುದು. ನಂತರ ಭೂ ಮಾಲೀಕರಿಗೆ ಇಡೀ ಗಂಟಿನಲ್ಲೇ ಪರಿಹಾರ. ರೈತರ ಸಾಲ ಮನ್ನಾ. ರೈತರಿಗೆ ನ್ಯಾಯಬೆಲೆಯಲ್ಲಿ ವ್ಯವಸಾಯಕ್ಕೆ ಬೇಕಾದ ಉಪಕರಣಗಳ ಸರಬರಾಜು. ಖುಷ್ಕಿ ರೈತರಿಗೆ ಭೂಗರ್ಭ ಜ್ಞಾನವನ್ನು ಹೊಂದುವ ಯೋಜನೆ. ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಇದೆಲ್ಲವನ್ನೂ ಮಾಡಬೇಕು. ಮತ್ತೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ಹೇಳಿದ್ದಾರೆ ಇದು ಎರಡೂ ಆಗುವುದಿಲ್ಲ. ಖುಷ್ಕಿ ಜಮೀನು ಅಭಿವೃದ್ಧಿಯಾಗಬೇಕು ಅಂತ ದೊಡ್ಡ ಕಾರ್ಯಕ್ರಮವನ್ನು ಅಂದರೆ ೨ ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಅದನ್ನು ೧೦ ವರ್ಷಗಳಲ್ಲಿ ಮುಗಿಸಬೇಕಾಗಿದೆ. ಅದನ್ನು ಮಾಡಬೇಕಾದರೆ ಕೊಟ್ಟ ಸಾಲವನ್ನು ಕೊಡಬೇಡಿ, ಬ್ಯಾಂಕಿಗೆ ಬಡ್ಡಿ ಕೂಡ ಕಟ್ಟಬೇಡಿ ಅಂತ ಹೇಳಿದರೆ, ನಮ್ಮದಲ್ಲ ದುಡ್ಡು. ನಾವು ಇದನ್ನು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಪುನಃ ಈ ಕೊನೆಯ ಘಳಿಗೆಯಲ್ಲೂ ಅವರ ಹತ್ತಿರ ಬೇಡಿಕೊಳ್ಳುವುದೇನೆಂದರೆ, ದಯಮಾಡಿ ಸಾರ್ವಜನಿಕರಿಗೆ, ಲಕ್ಷಾಂತರ ಜನರಿಗೆ ನಾಳೆ ತೊಂದರೆಯಾಗುವ ರೀತಿಯಲ್ಲಿ ನಿಮ್ಮ ಕಾರ್ಯಕ್ರಮ ಬೇಡ. ನಿಮ್ಮ ಪ್ರತಿಭಟನೆಯನ್ನು ಏನು ಮಾಡಬೇಕೋ ಅದು ಇಷ್ಟರಲ್ಲೇ ನಮಗೆ ಗೊತ್ತಾಗಿದೆ, ಆದ್ದರಿಂದ ಈಗಲೂ ಕೂಡ ಅದನ್ನು ನಿಲ್ಲಿಸಿ ಅಂತ ನಾನು ಅವರಿಗೆ ಕೇಳಿಕೊಳ್ಳುತ್ತೇನೆ: ಈ ಸರ್ಕಾರವನ್ನು ನಿಮ್ಮ ಬೇಡಿಕೆಗಳಿಗೆ ವಿರೋಧ ಮಾಡುವ ಸರ್ಕಾರ ಎಂದು ತಿಳಿಯಬೇಡಿ. ಉದಾಹರಣೆಗೆ ಒಂದು ಕೆರೆ ಇರುತ್ತದೆ. ಆ ಕೆರೆಯಲ್ಲಿ ನೀರು ಬರಿದಾದಾಗ ರೈತರೇ ಅದನ್ನು ಎರಡು ಎಕರೆ ನಿಮಗೆ ಎರಡು ಎಕರೆ ನಿಮಗೆ ಅಂತ ಹಂಚಿಬಿಟ್ಟು ಅಂತಹ ಪ್ರತಿಯೊಬ್ಬರಿಂದಲೂ ೪ ಸಾವಿರ ೫ ಸಾವಿರ ಹಣವನ್ನು ವಸೂಲು ಮಾಡುವುದು. ಈ ರೀತಿಯಲ್ಲಿ ರೈತರ ಸಂಘದ ಕೆಲಸ ಆಗಬೇಕೆ ಅಂತ ನಾನು ಕೇಳುತ್ತಿದ್ದೇನೆ. ಅದೇ ರೀತಿ ಸಕಲೇಶ್ವರದಲ್ಲಿ ಒಂದು ಘಟನೆಯಾಯಿತು. ಅದು ಎಕ್ಸೈಜ್ ಶಾಪ್‌ಗಳ ಬಗ್ಗೆ. ಅಬಕಾರಿ ಅಂಗಡಿಗಳನ್ನು ಹರಾಜಿನಲ್ಲಿ ಅವರು ತೆಗೆದುಕೊಂಡಿರುತ್ತಾರೆ. ಅವರು ಪ್ರತಿ ತಿಂಗಳು ಕಿಸ್ತು ಕಟ್ಟಬೇಕು. ಇವರು ಅಲ್ಲಿಗೆ ಹೋಗಿ ಇದು ನಮ್ಮದು, ನಾವು ನಡೆಸುತ್ತೇವೆಂದು ಹೇಳಿ, ಅಂಗಡಿಯ ಮಾಲೀಕನನ್ನು ಅಲ್ಲಿಂದ ಹೊರಗೆ ಹಾಕಿ, ಆ ಅಬ್ಕಾರಿ ಅಂಗಡಿಯನ್ನು ತಾವೇ ನಡೆಸುತ್ತೇವೆಂದು ಬಲಾತ್ಕಾರವಾಗಿ ಇವತ್ತು ತೆಗೆದುಕೊಳ್ಳುತ್ತಿದ್ದಾರೆ. ಇದು ರೈತ ಸಂಘದ ಕೆಲಸವೇ ಎಂದು ನಾನು ಕೇಳುತ್ತಿದ್ದೇನೆ. ಮೊನ್ನೆ ಗಂಡಸಿಯಲ್ಲಿ ಒಂದು ಘಟನೆಯಾಯಿತು. ರೈತ ಸಂಘದವರು ಅಂತ ಹೇಳತಕ್ಕ ಕೆಲವರು, ಮತ್ತೊಂದು ರೈತ ಸಂಘಕ್ಕೆ ಸೇರಿದವರು ಎನ್ನುವ ಸಂದೇಹದ ಮೇಲೆ ಕೆಲವು ಜನರು ಅವನ ಮೇಲೆ ದಾಳಿ ಮಾಡಿ ಕಾಲನ್ನು ಕಡಿದು ಹಾಕಿದ್ದಾರೆ. ಇಂತಹವರ ಮೇಲೆ ಮೊಕದ್ದಮೆ ಹೂಡಬೇಡಿ ಕಾಯ್ದೆ ಪ್ರಕಾರ ಕ್ರಮ ತೆಗೆದುಕೊಳ್ಳಬೇಡಿ ಅಂತ ಹೇಳಿದರೆ ಅದು ಸಾಧ್ಯವಿಲ್ಲ. ನೇರವಾಗಿ ಹೇಳಿ. ದಯಮಾಡಿ ರೈತಸಂಘದವರು ಯಾರು ಅಂತ ಹೇಳುವುದಕ್ಕೆ ನೀವೇ ಗುರುತಿಸಿ. ಅದರಲ್ಲಿ ಬಾಕಿಯವರು ಬಂದು ನಿಮಗೆ ಕೆಟ್ಟ ಹೆಸರನ್ನು ತರು

ವುದಕ್ಕೆ ಆಸ್ಪದ ಕೊಡಬೇಡಿ. ಮೊನ್ನೆ ಇದೇ ರೀತಿ ಮೂಡಿಗೆರೆಯಲ್ಲಿ ಒಬ್ಬರು ರೈತ ಸಂಘದ ಪುಡಾರಿ ಅಂತ ಹೇಳಿಕೊಂಡು ಬಂದು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರಲ್ಲಿಗೆ ಹೋದಾಗ ಆ ಅಧಿಕಾರಿಯ ಕುತ್ತಿಗೆ ಕೈಹಾಕಿ ಇಲ್ಲಿಗೆ ಯಾರನ್ನು ಕೇಳಿಕೊಂಡು ಬಂದೆ. ಈ ಶರಟು ಯಾರದ್ದು ? ಇತ್ಯಾದಿ ಕೇಳಿದರೆ ಇದಕ್ಕೆ ಯಾರಾದರೂ ಸುಮ್ಮನಿರುತ್ತಾರೆಯೇ ? ಅದೇ ರೀತಿ ಅವರ ಕತ್ತನ್ನು ಹಿಡಿದು, ಈ ಷರಟು ಯಾರದ್ದು ಎಂಬುದಾಗಿ ಕೇಳಿದರೆ ಸ್ವಾಭಿಮಾನ ಇರತಕ್ಕಂತವರು ಯಾರಾದರೂ ಸಹಿಸಿಕೊಳ್ಳುತ್ತಾರೆಯೇ ? ಆದ್ದರಿಂದ ನಾನು ಪುನಃ ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇಂತಹ ಘಟನೆಯನ್ನು ದಯಮಾಡಿ ಬಿಟ್ಟುಬಿಡಿ. ನನ್ನ ಹತ್ತಿರ ಎಲ್ಲೆಲ್ಲಿ ಯಾವ ಯಾವ ರೀತಿಯ ಘಟನೆಗಳಾಗಿದ್ದಾವೆ ಎಂಬುದರ ವಿವರಗಳು ಇವೆ. ಅವುಗಳ ಬಗ್ಗೆ ಮತ್ತೊಂದು ಸಂದರ್ಭದಲ್ಲಿ ಹೇಳುತ್ತೇನೆ ಈ ಸಂದರ್ಭದಲ್ಲಿ ಅಲ್ಲ. ನಾನು ಇದರ ಬಗ್ಗೆ ಒಂದು ವಿವರವಾದ ಪಟ್ಟಿಯನ್ನೇ ಕೊಡುವುದಕ್ಕೆ ತಯಾರಾಗಿದ್ದೇನೆ ಮತ್ತು ಆ ರೈತ ಸಂಘದ ಅಧ್ಯಕ್ಷರಿಗೂ ಕಳುಹಿಸಬೇಕೆಂಬ ಯೋಚನೆ ಮಾಡಿದ್ದೇನೆ. ಯಾರು ಮಾಡಿದ್ದಾರೆ, ಅವರನ್ನು ರೈತ ಸಂಘದಿಂದ ಹೊರಗೆ ಹಾಕಿ.

ಶ್ರೀ ಹೆಚ್.ಡಿ. ದೇವೇಗೌಡ.—ನನ್ನ ಜಿಲ್ಲೆಯಲ್ಲಿ ಕೆರೆ ಅಂಗಳವನ್ನು ಪ್ಲಾಟ್ ಮಾಡಿ ಹರಾಜು ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಗ್ರಾನೈಟ್ ಬಗ್ಗೆ ಹೇಳುವುದಾದರೆ, ಕನಕಪುರದಿಂದ ಅವರು ಕಾಯ್ದೆ ಪ್ರಕಾರ ಲೀಸ್‌ಗೆ ತೆಗೆದುಕೊಂಡಿದ್ದಾರೆ. ಅದನ್ನು ಅವರು ಎಕ್ಸ್‌ಪೋರ್ಟ್ ಮಾಡುತ್ತಾರೆ. ಪ್ರತಿಯೊಂದು ಟ್ರಕ್ಕು ಅಲ್ಲಿಂದ ಹೊರಡಬೇಕಾದರೆ ಇವರಿಗೆ ಕಾಣಿಕೆ ಕೊಡಬೇಕು. ಮೊನ್ನೆ ಇದರ ಬಗ್ಗೆ ಅವರ ಜೊತೆಯಲ್ಲಿ ಚರ್ಚೆ ನಡೆದಾಗ ಇವರು ಕೂಡಿಸಿದ್ದಂತಹ ೪-೫ ಲಕ್ಷ ರೂಪಾಯಿಗಳನ್ನು ಅಲ್ಲಿಯ ಗ್ರಾಮಪಂಚಾಯ್ತಿಗೆ ಕೊಡಬೇಕೆಂದು ಒಂದು ಒಡಂಬಡಿಕೆ ಆಗಿತ್ತು. ಆದರೆ ಇವತ್ತಿನ ವರೆಗೂ ಅದನ್ನು ಕೊಟ್ಟಿಲ್ಲ. ಇವತ್ತೂ ಕೂಡ ವಸೂಲ್ಮಾಡುತ್ತಿದ್ದಾರೆ, ಇದನ್ನು ಸಹಿಸಲಿಕ್ಕೆ ಸಾಧ್ಯವೆ ? ಈಗ ಪ್ರಾರಂಭದಲ್ಲಿ ಚರ್ಚೆ ನಡೆಯುತ್ತಿದೆ. ನಾನು ಎರಡು ಭಾಗಗಳನ್ನು ಸಮವಾದ ದಾರಿಯಲ್ಲಿ ತೆಗೆದುಕೊಂಡು ಹೋಗೋಣವೆಂದು ಬಹಳಷ್ಟು ಪ್ರಯತ್ನ ಪಟ್ಟೆ. ನಾಳೆ ದಿವಸ ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಸಾರ್ವಜನಿಕರಿಗೆ ಅನಾನುಕೂಲವಾಗತಕ್ಕದ್ದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ; ಮತ್ತು ಪರಿಸ್ಥಿತಿ ಅತ್ಯಂತ ವಿಕೋಪಕ್ಕೆ ಹೋಗುವವರೆಗೆ ಕಾಯುತ್ತೇವೆ. ಅಲ್ಲಿಯವರೆಗೆ ದಂಡೋಪಾಯ ವನ್ನು ಅನುಸರಿಸುವುದಿಲ್ಲ, ಅವರ ವಿವೇಕಕ್ಕೆ ಬಿಡುತ್ತೇವೆ. ಅವರು ಚಳುವಳಿ ಮಾಡಲೇಬೇಕೆಂದರೆ ಸಾಂಕೇತಿಕವಾಗಿ ಮಾಡಲಿ. ಇಲ್ಲದಿದ್ದರೆ ಅವರಿಗೆ ಕೆಟ್ಟ ಹೆಸರು ಬರುವುದು ಖಂಡಿತ. ಅವರಿಗೆ ಕೆಟ್ಟ ಹೆಸರು ಬರುವುದು ಬೇಡವೆಂದು ನನ್ನ ಆಶಯ. ಅವರು ಚಳುವಳಿ ಹೂಡಿದರೆ ಅವರು ಸಾರ್ವಜನಿಕರ ಸಹಾನುಭೂತಿಯನ್ನು ಕಳೆದುಕೊಳ್ಳುತ್ತಾರೆ. ದಯವಿಟ್ಟು ಚಳುವಳಿ ಮಾಡಲೇ ಬೇಕೆಂದರೆ ಸಾಂಕೇತಿಕವಾಗಿ ಒಂದು ಗಂಟೆ ಕಾಲ ಮಾಡಿ ಮುಗಿಸಲಿ. ಪುನಃ ಬಂದು ಚರ್ಚೆ ಮಾಡೋಣ ನಾವು ಚರ್ಚೆಗೆ ಸಿದ್ಧರಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮುಖ್ಯಮಂತ್ರಿಗಳು ಇವತ್ತು ನಾಳೆ ನಡೆಯತಕ್ಕ ಬಂದ್ ಯಾವುದು ಇದೆ, ರೈತಸಂಘದ ಚಳುವಳಿ ಯಾವುದು ಇದೆ ಅದರ ವಿಚಾರ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಯಾವುದೇ ರೀತಿಯ ಹಿಂಸಾತ್ಮಕ ಚಟುವಟಿಕೆಗಳಿಗೆ ನಮ್ಮ ಕರ್ನಾಟಕ ರಾಜ್ಯದವರು ಇಳಿಯುವುದಿಲ್ಲವೆಂದು ನಾನು ಕೂಡ ಆಸೆ ಮಾಡುತ್ತೇನೆ. ಆದರೆ ಇವತ್ತು ಮುಖ್ಯಮಂತ್ರಿಗಳು ಮಾತನಾಡಿದಾಗ ಕೆಲವು ವಿಚಾರಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಇದರಲ್ಲಿ ಎರಡು ಪ್ರಶ್ನೆಗಳು ಬರುತ್ತವೆ. ಒಂದನೆಯದಾಗಿ ರೈತರು ಶಾಂತಿಯುತವಾಗಿ ಚಳುವಳಿ ಮಾಡುತ್ತಿದ್ದಾರೆ ಇಂಥ ಸಂದರ್ಭದಲ್ಲಿ, ಅವರ ಮೇಲೆ ಯಾವುದೇ ಬಲ ಪ್ರಯೋಗ ಮಾಡಬೇಡಿ ಎಂದು ಪೋಲೀಸರಿಗೆ ಹೇಳಿದ್ದಾರೆ. ಅದನ್ನು ತಾವು ಗಮನ ಕೊಟ್ಟು ಭಾವಿಸಿದ್ದೀರೆಂದು ಕೇಳಿದ್ದೇನೆ. ಯಾವುದೇ ರೀತಿಯ ಬಲಪ್ರಯೋಗ ಮಾಡಬೇಡಿ ಎಂದು ಸ್ಪಷ್ಟವಾಗಿ ಹೇಳಬೇಕಾದರೆ ಇದರಲ್ಲಿ ಬಹಳ ವಿಶೇಷತೆ ಇದೆ. ಮತ್ತೊಂದು ಮಾತು ಹೇಳಿದರು, ಅತ್ಯಂತ ವಿಕೋಪಕ್ಕೆ ಹೋಗುವವರೆಗೆ ಕಾಯುತ್ತೇವೆ ಎಂದು. ವಿಕೋಪಕ್ಕೆ ಹೋಗದ ಹಾಗೆ ಕಾಯ್ದುಕೊಳ್ಳುವುದು ರೈತರದ್ದು ಮತ್ತು ಸರ್ಕಾರದ ಕರ್ತವ್ಯವಾಗಿದೆ. ವಿಕೋಪಕ್ಕೆ ಹೋದರೆ ಸಾಕಷ್ಟು ಅನಾಹುತವಾಗುತ್ತದೆ. ತಮಗೆ ಆ ಉದ್ದೇಶ ಇಲ್ಲದೆ ಇರಬಹುದು. ಆದರೆ ಭಾಷೆ ಬಳಸುವಾಗ ಜಾಗ್ರತೆ ಇರಬೇಕು. ಯಾವುದೇ ಭಾಷೆಯನ್ನು ಮುಖ್ಯಮಂತ್ರಿಗಳಾದವರು ಬಳಸುವಾಗ ಅದರ ಪರಿಣಾಮವನ್ನು ಕೂಡ ನೋಡ ಬೇಕಾಗುತ್ತದೆ. ಎರಡನೆಯದಾಗಿ, ನಾಳೆ ಅವರು ಚಳುವಳಿ ಮಾಡುತ್ತಿದ್ದಾರೆ. ನಾಳೆ ಚಳುವಳಿ

ಮಾಡುವ ಸಂದರ್ಭದಲ್ಲಿ ತಾವು ಸ್ವಲ್ಪ ಪ್ರಚೋದನೆ ಕೊಟ್ಟಿದ್ದೀರೆಂದು ಹೇಳಬೇಕಾಗುತ್ತದೆ. ಇವತ್ತು ರೈತ ಸಮೂಹದವರು ಕೇಂದ್ರ ಸರ್ಕಾರದ ಮುಂದೆ, ರಾಜ್ಯ ಸರ್ಕಾರದ ಮುಂದೆ ಚಳುವಳಿ ಮಾಡತಕ್ಕ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಸೀಮಿತವಾದ ವಿಚಾರಗಳನ್ನು ಅದರ ಮುಂದಿಟ್ಟು, ರಾಜ್ಯ ಸರ್ಕಾರಕ್ಕೆ ಸೀಮಿತವಾದ ವಿಚಾರಗಳನ್ನು ಈ ಸದನದ ಮುಂದಿಟ್ಟು ಚರ್ಚೆ ಮಾಡಬೇಕು, ಏಕೆಂದರೆ ತಾವು ಪಕ್ಷದ ಪದಾಧಿಕಾರಿಗಳು ಅಲ್ಲ, ಮುಖ್ಯಮಂತ್ರಿಯಾಗಿ ಕಾನೂನು ವ್ಯವಸ್ಥೆ ಮಾಡಬೇಕಾದವರು ಮಾತನಾಡುವಾಗ ರಾಜ್ಯದಲ್ಲಿರತಕ್ಕ ರೈತರ ಮೇಲೆ ದೃಷ್ಟಿ ಹೋಗದೆ ಕೇಂದ್ರ ಸರ್ಕಾರದ ಮೇಲೆ ಪ್ರಚೋದನೆಯು ದೃಷ್ಟಿ ಆಗಿದೆ. ಇದು ನಿಮ್ಮ ಹೇಳಿಕೆ ಆ ರೀತಿ ನೀವು ಹೇಳಿದ್ದನ್ನು ಅದನ್ನು ಸರಿ ಮಾಡಿ. ನಾನು ಸರ್ಕಾರಕ್ಕೆ ಎಚ್ಚರಿಕೆ ನೀಡುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಈ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಆಕ್ಷೇಪಣೆಯೂ ಇಲ್ಲ. ಮುಖ್ಯಮಂತ್ರಿಗಳು ಹೇಳಿಕೆ ಕೊಡುವಾಗ ಕೆಲವು ಶಬ್ದಗಳನ್ನು ಪ್ರಯೋಗ ಮಾಡಿದ್ದರಿಂದ ಆಗತಕ್ಕ ಸಾಧಕಭಾದಕಗಳನ್ನು ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅದನ್ನು ತಿಳಿದುಕೊಂಡೇ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಿಳಿದುಕೊಂಡು ಹೇಳಿದ್ದರೆ ಸರಿ. ನಾವು ಬುದ್ಧಿವಂತಿಕೆಯಿಂದ ಕಡಿಮೆ ಇರಬಹುದು. ಜನಸಾಮಾನ್ಯರು ತಮ್ಮ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವಾಗ ರೈತರಿಗೆ ಅದರಿಂದ ತೊಂದರೆ ಆಗಬಾರದೆಂದು ಹೇಳಿದೆ ಅಷ್ಟೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬಡ ರೈತರು ಬಹಳ ತೊಂದರೆಗೆ ಈಡಾಗುತ್ತಿದ್ದಾರೆ. ರುದ್ರಪ್ಪನವರು ರೈತಸಂಘದ ಗುತ್ತೇದಾರಿ ತೆಗೆದುಕೊಂಡ ಹಾಗೆ ಇದೆ.

ಅಧ್ಯಕ್ಷರು.—ಮುಖ್ಯವಾದ ವಿಚಾರನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ, ಸಾಕು.

The Karnataka Educational Institutions (Prohibition of Capitation Fee) Bill 1984

Leave to introduce

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೪ನೇ ಇಸವಿಯ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕ ನಿಷೇದ) ಮಸೂದೆಯನ್ನು ಮಂಡಿಸಲು ಅನುಮತಿ ಕೋರುತ್ತೇನೆ.

MR. SPEAKER.—The question is :

"That leave be granted to introduce the Karnataka Educational Institutions (Prohibition of Capitation Fee) Bill, 1984."

The motion was adopted and the bill was granted

SRI B. RACHAIAH.—I Introduce the Karnataka Educational Institutions (Prohibitions of Capitation Fee) Bill 1984

MR. SPEAKER.—The Bill is Introduced. Annexure.